Reg. No. | | | | | | | | | | | |

# BASKALN 302/BSWKALN 302/HRDKALN 302/ BVAKALN 302

**III Semester B.A./B.S.W./B.A. (HRD)/B.V.A. Examination, Dec. 2023/Jan. 2024**
**(NEP-2020) (2023-24 Batch Onwards)**

**ಕನ್ನಡ**

**ಕನ್ನಡ ಭಾಷಾ ಪತ್ರಿಕೆ**

Time : 2 Hours  Max. Marks : 60

I. ಯಾವುದಾದರೂ **ಎರಡು** ಪ್ರಶ್ನೆಗಳಿಗೆ ಉತ್ತರಿಸಿರಿ. **(2×8=16)**

1) ಲಾವಣಿಗಳಲ್ಲಿ ವ್ಯಕ್ತಗೊಂಡ ರಾಣಿ ಚೆನ್ನಮ್ಮಳ ಜಾಣ್ಮೆ ಮತ್ತು ಹೋರಾಟದ ವೈಖರಿಯನ್ನು ವಿವರಿಸಿರಿ.
2) ಕೃಷಿಕರ ಕಾಯಕವು 'ಹರಗೋಣ ಬಾ ಹೊಲ' ಕವನದಲ್ಲಿ ವ್ಯಕ್ತಗೊಂಡ ಬಗೆಯನ್ನು ವಿವರಿಸಿರಿ.
3) ಕೃಷಿ ಸಂಬಂಧಿ ಆಚರಣೆಯ ಕಂಬಳದ ಕೋಣಗಳ ಗೆಲುವು ಯಜಮಾನನ ಗೆಲುವು ಹೌದು – ವಿವರಿಸಿರಿ.
4) 'ಇಡ್ಲಿಯ ಇತಿಹಾಸ' ಪ್ರಬಂಧದ ಸ್ವಾರಸ್ಯವನ್ನು ಕುರಿತು ಬರೆಯಿರಿ.

II. ಯಾವುದಾದರೂ **ಎರಡು** ಪ್ರಶ್ನೆಗಳಿಗೆ ಉತ್ತರಿಸಿರಿ. **(2×6=12)**

1) 'ಆಗಸ್ಟ್ ವೀರ' ಕತೆಯ ಆಶಯವೇನು ?
2) ಅಡಿಕೆ ಬೆಳೆಗಾರರ ಸಾಮಾಜಿಕ ಜವಾಬ್ದಾರಿಗಳ ಕುರಿತು ವಿವರಿಸಿರಿ.
3) ಹಿಮಾದಾಸ್ ಅವರ ಬಾಲ್ಯದ ಬದುಕು ಮತ್ತು ಕನಸುಗಳನ್ನು ಕುರಿತು ವಿವರಿಸಿರಿ.
4) ಯಾವ ಭಾಷೆಯು ಶಿಕ್ಷಣದ ಮಾಧ್ಯಮವಾಗಬೇಕೆಂದು ಚಿಂತಕರು ಬಯಸುತ್ತಾರೆ ?

III. ಈ ಕೆಳಗಿನ ಪದ್ಯ ಭಾಗಗಳಲ್ಲಿ ಯಾವುದಾದರೂ **ಒಂದಕ್ಕೆ** ಭಾವ, ಸಂದರ್ಭ, ಸ್ವಾರಸ್ಯವನ್ನು ವಿವರಿಸಿರಿ. **(1×4=4)**

1) ಬನದ ಕರಡಿಯ ಹಾಗೆ
ಚಿಕ್ಕ ಮಕ್ಕಳ ಹೊತ್ತು
ಗಂಡನ ಸಾಕಿದಳು ಕಾಸು ಗಂಟಿಕ್ಕಿದಳು
ನೊಂದ ನಾಯಿಯ ಹಾಗೆ ಬೈದು, ಗೊಣಗಿ, ಗುದ್ದಾಡಿದಳು ;
ಸಣ್ಣತನ, ಕೊಂಕು, ಕೆರೆದಾಟ ಕೋತಿಯ ಹಾಗೆ ;
ಎಲ್ಲಕ್ಕೆ ಮನೆತನದ ಉದ್ಧಾರ ಸೂತ್ರ
ಈಕೆ ಉರಿದೆದ್ದಾಳು
ಮಗ ಕೆಟ್ಟರೆ, ಗಂಡ ಬೇರೆ ಕಡೆಗೆ ಹೋದಾಗ ಮಾತ್ರ

**ಅಥವಾ**

P.T.O.

2) ಏನನಾಡಿದಡೇನು ಫಲ ದೈ
ವಾನುಕೂಲ್ಯದ ಕುಣಿಕೆ ಬೇರಿಹು
ದಾ ನರೇಂದ್ರನ ಸಾರಿ ಸೋತುದು ನಿಮಿಷ ಮಾತ್ರದಲಿ
ಆ ರೂಢಿಯ ಹತ್ತು ಸಾವಿರ
ಮಾನಿನಿಯರನು ಮತ್ತೆ ಸೋತನು
ಮಾನನಿಧಿಯೋ ಮತ್ತೆ ಪಣವೇನೆಂದನಾ ಶಕುನಿ

IV. ಈ ಕೆಳಗಿನ ಪದ್ಯ ಭಾಗಗಳಲ್ಲಿ ಯಾವುದಾದರೂ ಮೂರಕ್ಕೆ ಭಾವ, ಸಂದರ್ಭ ಬರೆಯಿರಿ. **(3×4=12)**

1) ಸತ್ತವರ ನಂಬುಗೆಗೆ ಎರಡನೆಸದಿರಿ.
2) ಅರಮನೆಯವರಿಗೆಲ್ಲಾ ತಪ್ಪಿತೋ ದಿಕ್ಕ.
3) ಯೌವನವ ಕಳೆದವಳು ಚಿಂದಿಯ ಸೀರೆ ಉಟ್ಟುಕೊಂಡು.
4) ಎತ್ತಲ್ಲ ಅವು ನಮ್ಮ ಮುತ್ತುಗೋಳು.
5) ಕರೆಯ ಬಾರದಾ ಜನಾರ್ದನನಾಣೆಯೆಂದನು.

V. ಯಾವುದಾದರೂ ಎರಡು ವಿಷಯಗಳಿಗೆ ಟಿಪ್ಪಣಿ ಬರೆಯಿರಿ. **(2×4=8)**

1) ಕುವೆಂಪು.
2) ಶಕುನಿ.
3) ಪಿ. ಲಂಕೇಶ್.
4) ಪುಲವೇಡಿ.

VI. ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿರಿ. **(8×1=8)**

1) 'ರಕ್ತ ತರ್ಪಣ' ಕವಿತೆಯನ್ನು ಯಾವ ಕವನ ಸಂಕಲನದಿಂದ ಆರಿಸಲಾಗಿದೆ ?
2) 'ಸಿಕಂದರ್ ಕಾಪು' ಎನ್ನುವ ಕಾವ್ಯನಾಮದಲ್ಲಿ ಬರೆಯುವ ಕವಿ ಯಾರು ?
3) ದ. ರಾ. ಬೇಂದ್ರೆಯವರ ಪೂರ್ಣನಾಮಧೇಯವೇನು ?
4) 'ಕುಸುಮಬಾಲೆ' ಕೃತಿಯ ಕರ್ತೃ ಯಾರು ?
5) ಕುಮಾರವ್ಯಾಸನ ನಿಜನಾಮಧೇಯವೇನು ?
6) ಕಡಲತಡಿಯ ಭಾರ್ಗವ ಎಂದು ಪ್ರಖ್ಯಾತಿಯನ್ನು ಪಡೆದ ಕವಿ ಯಾರು ?
7) ಸೇಡಿಯಾಪು ಕೃಷ್ಣಭಟ್ಟರ ಹೆತ್ತವರ ಹೆಸರೇನು ?
8) ಗಂಗಾ ಪಾದೇಕಲ್ ಅವರ ಮೊದಲ ಕಥಾ ಸಂಕಲನದ ಹೆಸರೇನು ?

---

Reg. No. | | | | | | | | | | | | |

**BBAKALN 302**

## III Semester B.B.A. Degree Examination, December 2023/January 2024
## (NEP – 2020) (2023 – 24 Batch Onwards)
## KANNADA

ಸಮಯ : 2 ಗಂಟೆಗಳು                                    ಗರಿಷ್ಠಾಂಕಗಳು : 60

I. ಈ ಕೆಳಗಿನ ಎರಡು ಪ್ರಶ್ನೆಗಳಿಗೆ ಉತ್ತರಿಸಿರಿ : **(2×8=16)**

1) ಮೂಲ ಸಂಸ್ಕೃತಿ ಪರಂಪರೆ ಮರೆಯಾಗುವ ನೋವನ್ನು 'ಬತ್ತಲಾರದ ಗಂಗೆ' ಕವನ ಹೇಗೆ ಅಭಿವ್ಯಕ್ತಿಸಿದೆ ? ವಿವರಿಸಿ.

2) ಬದಲಾಗುತ್ತಿರುವ ಮಾನವೀಯ ಸಂವೇದನೆಗಳು ಮತ್ತು ಮಾನವೀಯ ಸಂಘರ್ಷವನ್ನು 'ಯುಗಾದಿ' ಕಥೆಯ ಮೂಲಕ ವಿವರಿಸಿ.

3) ಸೋಮೇಶ್ವರ ಶತಕದಲ್ಲಿ ಪ್ರತಿಪಾದಿತವಾದ ನೀತಿ ಬೋಧನೆಯನ್ನು ವಿವರಿಸಿ.

4) 'ಅಮ್ಮ ಹೇಳಿದ ಎಂಟು ಸುಳ್ಳುಗಳು' ಪ್ರಸಂಗದಲ್ಲಿ ಅಭಿವ್ಯಕ್ತಗೊಂಡ 'ಅಮ್ಮನ' ವ್ಯಕ್ತಿತ್ವವನ್ನು ಬರೆಯಿರಿ.

II. ಈ ಕೆಳಗಿನ ಎರಡು ಪ್ರಶ್ನೆಗಳಿಗೆ ಉತ್ತರಿಸಿರಿ : **(2×6=12)**

1) 'ಒಡವೆ ಹೋಯಿತು ಮನದೃಢವಾಯಿತು' ಕೀರ್ತನೆಯಲ್ಲಿ ಕನಕದಾಸರು ಹೇಳುವ ಆತ್ಮಸಾಕ್ಷಾತ್ಕಾರಕ್ಕಾಗಿ ಕಳೆದುಕೊಳ್ಳಬೇಕಾದ ಒಡವೆಗಳು ಯಾವುವು ? ವಿವರಿಸಿ.

2) ರಂಗವಲ್ಲಿ ಕವನದ ಆಶಯವನ್ನು ಬರೆಯಿರಿ.

3) 'ಬಳೆಗಾರನ ಹಾಡು' ಕವನದಲ್ಲಿ ಕಂಡುಬರುವ ಪ್ರೇಮದ ಪರಿಕಲ್ಪನೆಯನ್ನು ಬರೆಯಿರಿ.

4) ಉದ್ದಾಲಕ ಹಾಗೂ ಚಂಡಿಯ ಸಂಸಾರದ ಚಿತ್ರಣವನ್ನು ಲಕ್ಷ್ಮೀಶ ಕವಿಯು ಹೇಗೆ ಚಿತ್ರಿಸಿದ್ದಾನೆ ? ವಿವರಿಸಿ.

ಪು.ತಿ.ನೋ.

III. ಒಂದಕ್ಕೆ ಭಾವ ಸ್ವಾರಸ್ಯ ಬರೆಯಿರಿ : (1×4=4)

1) ಎಲುಬು ಮಾಂಸವನು ತುಂಬಿಟ್ಟುಕೊಂಡು
ನನ್ನ ಕುಲ ಹೆಚ್ಚು, ನಿನ್ನ ಕುಲ ಕಡಿಮೆ ಎಂದು
ಹೊಡೆದಾಡುವಂತಹ ಅಣ್ಣಗಳನ್ನು ಹಿಡಿತಂದು
ಮೂಗನೆ ಸವರಿ ಮೆಣಸಿನ ಹಿಟ್ಟು ತುಪ್ಪವ ತುಂಬಿ
ನಮ್ಮ ಪಡಿಹಾರಿ ಉತ್ತಣ್ಣನ ಎಡದ ಪಾದುಕೆಯಿಂದ
ಪಟಪಟನೆ ಹೊಡೆ ಎಂದಾತ
ನಮ್ಮ ಅಂಬಿಗರ ಚೌಡಯ್ಯ ನಿಜಶರಣನು.

ಅಥವಾ

2) ಉಡುರಾಜಂ ಕಳೆಗುಂದಿ ಪೆರ್ಚದಿಹನೇ ನ್ಯಗ್ರೋಧ ಬೀಜಂ ಕೆಲಂ
ಕಿಱಿದು ಪೆರ್ಮರನಾಗದೇ ಎಳೆಗರುಂ ಎತ್ತಾಗದೇ ಲೋಕದೊಳ್
ಮಿಱಿ ಪಣ್ಣಾಗದೆ ದೈವದೊಲ್ಮೆಯಿರಲಾ ಕಾಲಾನುಕಾಲಕ್ಕೆ ತಾಂ
ಬಡವಂ ಬಲ್ಲಿದನಾಗನೇ ಹರಹರಾ ಶ್ರೀ ಚೆನ್ನಸೋಮೇಶ್ವರಾ ।

IV. ಮೂರು ಸಾಲುಗಳಿಗೆ ಸಂದರ್ಭ ಸ್ವಾರಸ್ಯ ಬರೆಯಿರಿ : (3×4=12)

1) ರಂಗಮಂದಿರ ಅದೇ, ನಾಟಕವೂ ಅದೇ.
2) ಅಂಧಕನ ಕೈಯನಂದಕ ಹಿಡಿದೆಡೆ.
3) ಬೆಟ್ಟವೇರಿ ಹಸೆಯು ಬರೆವ ಭಕ್ತಿ ಎಂಥದ್ದು ?
4) ಗುಡಪಾನಂಗಳೊಳದ್ದೆ ಬೇವಿನ ಫಲ ಸ್ವಾದಪ್ಪುದೇ ?
5) ಮುಳ್ಳಿಡಿದ ಮರವೇರಿದಂತಾದುದು.

V. ಎರಡಕ್ಕೆ ಟಿಪ್ಪಣಿ ಬರೆಯಿರಿ : (2×4=8)

1) ಕೆ. ಪಿ. ಪೂರ್ಣಚಂದ್ರ ತೇಜಸ್ವಿ
2) ಪು.ತಿ.ನ.
3) ಪುಲಿಗೆರೆಯ ಸೋಮನಾಥ.
4) ಲಕ್ಷ್ಮೀಶ.

VI. ಒಂದು ವಾಕ್ಯದಲ್ಲಿ ಉತ್ತರಿಸಿರಿ : (1×8=8)

1) ಎಂ. ಗೋಪಾಲಕೃಷ್ಣ ಅಡಿಗರ ಹುಟ್ಟೂರು ಯಾವುದು ?

2) 'ತಬರನ ಕಥೆ'ಯನ್ನು ಬರೆದ ಲೇಖಕರು ಯಾರು ?

3) 'ರಂಗವಲ್ಲಿ' ಕವನವನ್ನು ಯಾವ ಕವನ ಸಂಕಲನದಿಂದ ಆಯ್ದುಕೊಳ್ಳಲಾಗಿದೆ ?

4) 'ನಮ್ಮಮ್ಮ ಅಂದ್ರೆ ನಂಗಿಷ್ಟ' ಕೃತಿಯ ಲೇಖಕರು ಯಾರು ?

5) ಕನ್ನಡದ ಪ್ರೇಮಕವಿ ಎಂದು ಯಾರನ್ನು ಕರೆಯುತ್ತಾರೆ ?

6) ಸೋಮೇಶ್ವರ ಶತಕವನ್ನು ಸಂಪಾದಿಸಿದವರು ಯಾರು ?

7) ಲಕ್ಷ್ಮೀಶನ ಕೃತಿ ಯಾವುದು ?

8) 'ನೆನಪಾಗಿ ಕಾಡುತ್ತೆ ಆ ಒಂದು ರೈಲುಯಾನ' ಲೇಖನದ ಲೇಖಕರು ಯಾರು ?

---

Reg. No. [ ]

# BASKALN 301/HRDKALN 301/BSWKALN 301/ BVAKALN 301

**III Semester B.A./B.A. (HRD)/B.S.W./B.V.A.**

**Examination, December 2023/January 2024**

**(NEP – 2020) (2022 – 23 Batch)**

**KANNADA LANGUAGE**

Time : 2 Hours                                                                 Max. Marks : 60

I. ಕೆಳಗಿನ ಮೂರು ಪ್ರಶ್ನೆಗಳಿಗೆ ಉತ್ತರಿಸಿರಿ. **(3×8=24)**

1) ವಿಶ್ವಾಮಿತ್ರ ಮುನಿಗಳು ಹರಿಶ್ಚಂದ್ರನಿಗೆ ಒಡ್ಡಿದ ಸವಾಲುಗಳು ಹಾಗೂ ಆತನು ಅದರಿಂದ ಪಾರಾಗಿ ಬಂದ ಸಂದರ್ಭವನ್ನು ವಿವರಿಸಿರಿ.

**ಅಥವಾ**

ದೇಹ, ಆತ್ಮ ಮತ್ತು ಪರಮಾತ್ಮಗಳ ಕುರಿತಾದ ರತ್ನಾಕರವರ್ಣಿಯ ವಿಚಾರಗಳನ್ನು ವಿವೇಚಿಸಿರಿ.

2) ಮನೆಯವರೆಗೆ ರಸ್ತೆಯನ್ನು ಮಾಡುವ ಮೂಲಕ ಸಂಬಂಧಗಳ ಬೆಸೆಯುವಿಕೆಯು ಸಾಧ್ಯವಾಗಿದೆಯೇ ? ವಿಶ್ಲೇಷಿಸಿರಿ.

**ಅಥವಾ**

'ತಾಯಿಯ ಆಸೆ' ಲೇಖನದಲ್ಲಿ ಸುಜಯಳು ತನ್ನ ಕಲ್ಪನೆಯಲ್ಲಿ ನಡೆಸುತ್ತಿದ್ದ ಯುದ್ಧದಿಂದ ಹೊರಬರುವುದಕ್ಕೆ ಸಾಧ್ಯವಾದ ಸನ್ನಿವೇಶವನ್ನು ವಿವರಿಸಿರಿ.

3) ರಾವಣನು ತನ್ನ ಶಿರಗಳನ್ನೇ ಕತ್ತರಿಸುವ ನಿರ್ಧಾರ ಮಾಡಲು ಕಾರಣ ಮತ್ತು ಅದರ ಪರಿಣಾಮಗಳೇನು ? ವಿವರಿಸಿರಿ.

**ಅಥವಾ**

ರಾವಣನು ಸ್ವಪ್ನದಲ್ಲಿ ಕಂಡ ಸೀತೆಯ ಕುರಿತು ಬರೆಯಿರಿ.

II. ಕೆಳಗಿನ ಮೂರು ಪ್ರಶ್ನೆಗಳಿಗೆ ಉತ್ತರಿಸಿರಿ. (3×5=15)

1) ಮದಲಿಂಗನ ಜವ್ವನದ ಸರಸವು ವಿರಸವಾದ ಬಗೆಯನ್ನು ವಿವರಿಸಿರಿ.

**ಅಥವಾ**

'ಕತ್ತಲ ಗೂಡಿನ ದೀಪ' ಕವನದ ಆಶಯವನ್ನು ವಿಶ್ಲೇಷಿಸಿರಿ.

2) ಭಾವಚಿತ್ರಗಳು ಬದುಕಿನ ಅವಿಭಾಜ್ಯ ಅಂಗಗಳೆಂಬ ವಿಚಾರವು ಲೇಖನದಲ್ಲಿ ಹೇಗೆ ಮೂಡಿಬಂದಿದೆ ? ವಿವರಿಸಿರಿ.

**ಅಥವಾ**

ಅಂಗಿ, ಅಸಲಿ-ನಕಲಿ ಮತ್ತು ಕುಂಭದ್ರೋಣ – ಈ ಪದಗಳ ವೈಶಿಷ್ಟ್ಯಗಳ ಕುರಿತು ಪ್ರೊ. ವೆಂಕಟಸುಬ್ಬಯ್ಯ ಅವರ ಅಭಿಪ್ರಾಯಗಳನ್ನು ಬರೆಯಿರಿ.

3) 'ದಶಾನನ ಸ್ವಪ್ನ ಸಿದ್ಧಿ' ಕಾವ್ಯಭಾಗದಲ್ಲಿ ಕುವೆಂಪು ಅವರ ಆಶಯವು ಹೇಗೆ ಅಭಿವ್ಯಕ್ತಗೊಂಡಿದೆ ? ವಿವರಿಸಿರಿ.

**ಅಥವಾ**

ರಾವಣ – ಮಂಡೋದರಿಯರ ಬಾಂಧವ್ಯವು ಕಾವ್ಯಭಾಗದಲ್ಲಿ ಹೇಗೆ ಮೂಡಿಬಂದಿದೆ ? ವಿವರಿಸಿರಿ.

III. ಕೆಳಗಿನ **ಒಂದು** ಪದ್ಯಭಾಗದ ಸಂದರ್ಭ ಸೂಚಿಸಿ ಸ್ವಾರಸ್ಯವನ್ನು ಬರೆಯಿರಿ. (1×5=5)

1) ಘನಸತ್ಯವೇ ಜೀವವೆಂದಿರ್ದ ನಿನ್ನ ಹೊಲೆ
ಯನ ಸೇವೆ ಗುರುಸೇವೆ ಹೊತ್ತ ಹೊಲೆವೇಷ ಪಾ
ವನ ಪುಣ್ಯವೇಷ ಸುಡುಗಾಡ ರಕ್ಷಿಸುವಿರವು ತಾಯಜ್ಞರಕ್ಷೆಯಿರವು
ಅನುದಿನಂ ಭುಂಜಿಸಿದ ಶವದ ಶಿರದಕ್ಕಿಯ
ಲ್ಲನಪೇಯ ಚಾಂದ್ರಾಯಣಂ ಪುತ್ರನಳಿವು ಜ
ನ್ಮನಿಕಾಯದಳಿವಂಗನಾಹನನ ಮಾಯಾಹನನವಂಜ ಬೇಡೆಂದನು

2) ಇಲ್ಲೆ ಮನೆಯೊಳಗೆ
ನಾಲ್ಕು × ನಾಲ್ಕರ ದೇವರ ಮನೆಯಲ್ಲಿ
ಮುತ್ತು ಹವಳ ಶ್ರೀಗಂಧಗಳ ಚೆಲ್ಲಿ
ಪಚ್ಚೆ ರತ್ನ ಅಮೃತಶಿಲೆ ಹಾಸಿ
ಲಕ್ಷ ದೀಪವ ಹಚ್ಚಿ ಬೇಕಾದ್ದ ಮುಂದಿರಿಸಿ
ಕೈ ಮುಗಿದು ನಿಂದಿರುವೆ
ಬಾಗಿಲಿಂದಾಚೆ ತಲೆಹಾಕುವುದ ಬಿಟ್ಟು
ಬೇಕಾದ್ದು ಕೇಳಿರೋ

IV. ಕೆಳಗಿನವುಗಳಲ್ಲಿ ಎರಡರ ಸಂದರ್ಭ ಸೂಚಿಸಿ ಸ್ವಾರಸ್ಯವನ್ನು ಬರೆಯಿರಿ. (2×4=8)

1) ಸುರತ್ನತ್ವಂ ಮೂರಿವು ಮುಕ್ತಿಗೆಂದರುಪಿದ್ಯೆ.

2) ತನ್ನ ಕಡಿವವರ್ಗೆ ತಣ್ಣೆಳಲೀವ ಮರದಂತೆ.

3) ಬಿಳಿ ಮೈಯ ಮಾತಿಗೆ ಬಸವನ ಗೋಣು.

4) ಸೊಸಿ ಅಂತ ಕೈಯ ತಡದೀನಿ ಜ್ವಾಕಿ.

V. ಕೆಳಗಿನ ಪ್ರಶ್ನೆಗಳಿಗೆ ವಾಕ್ಯರೂಪದಲ್ಲಿ ಉತ್ತರಿಸಿರಿ. (8×1=8)

1) ರಾಘವಾಂಕನು ಯಾವ ಛಂದಸ್ಸಿನಲ್ಲಿ ಕಾವ್ಯ ರಚನೆ ಮಾಡಿದ್ದಾನೆ ?

2) ಗೋವಿಂದ ಪೈ ಅವರ ಗುರುಗಳು ಯಾರು ?

3) 'ಬರ್ಫದ ಬೆಂಕಿ' ಎಂಬುದು ಯಾರ ಕವನಸಂಕಲನ ?

4) 'ವೈದೇಹಿ' ಎಂಬುದು ಯಾರ ಕಾವ್ಯನಾಮ ?

5) 'ಗೆಸ್ಟಾಲ್ಟ್' ಎನ್ನುವ ಜರ್ಮನ್ ಪದಕ್ಕೆ ಕನ್ನಡದಲ್ಲಿ ಏನೆನ್ನುತ್ತಾರೆ ?

6) 'ನಂಗನಾಚ್' ಎಂಬುದು ಯಾವ ಭಾಷೆಯ ಶಬ್ದ ?

7) ಕುವೆಂಪು ಅವರ ಯಾವ ಕೃತಿಗೆ ಜ್ಞಾನಪೀಠ ಪ್ರಶಸ್ತಿ ಲಭಿಸಿದೆ ?

8) ಮೈಥಿಲಿ ಎಂದರೆ ಯಾರು ?

---

Reg. No. | | | | | | | | | | | | |

**BCMKALN 301**

**III Semester B.Com. Examination, December 2023/January 2024**
**(NEP – 2020) (2022 – 2023 Batch)**
**ಕನ್ನಡ ಭಾಷಾ ಪತ್ರಿಕೆ – 3**

Time : 2 Hours Max. Marks : 60

I. ಕೆಳಗಿನ ಮೂರು ಪ್ರಶ್ನೆಗಳಿಗೆ ಉತ್ತರಿಸಿ. **(3×8=24)**

1) ಮಾನವರ ವಿಕಾರ ಮನಸ್ಥಿತಿ ಲಕ್ಷ್ಮೀಶನ ಕಾವ್ಯಭಾಗದಲ್ಲಿ ಹೇಗೆ ಮೂಡಿ ಬಂದಿದೆ ?

**ಅಥವಾ**

ಗುರು ಶಿಷ್ಯರ ಸಂಬಂಧವನ್ನು ಕುರಿತು ಶರೀಫರ ಮಾತುಗಳನ್ನು ಸಂಗ್ರಹಿಸಿ.

2) 'ಕುಣಿಯುವ ಕುರುಡು ಕಾಂಚಾಣ' ಪ್ರಬಂಧದ ಆಶಯವೇನು ?

**ಅಥವಾ**

'ಕಲ್ಲು ಮೊಟ್ಟೆ' ಕಥೆಯ ನಾಯಕ ಪದ್ಮನಾಭನ ಬದುಕಿನ ತಲ್ಲಣವನ್ನು ವಿವರಿಸಿ.

3) ಅರಗಿನ ಮನೆಯಿಂದ ಪಾಂಡವರು ಪಾರಾದ ಬಗೆಯನ್ನು ವಿವರಿಸಿ.

**ಅಥವಾ**

ಜನಪದ ಮಹಾಭಾರತದಲ್ಲಿ ವ್ಯಕ್ತಗೊಂಡ ಅರಗಿನ ಮನೆಯ ಪ್ರಸ್ತಾಪವನ್ನು ಕುರಿತು ಬರೆಯಿರಿ.

II. ಕೆಳಗಿನ ಮೂರು ಪ್ರಶ್ನೆಗಳಿಗೆ ಸಂಕ್ಷಿಪ್ತವಾಗಿ ಉತ್ತರಿಸಿ. **(3×5=15)**

1) ಹೊನ್ನಮ್ಮ ಹೆಣ್ಣಿನ ಹಿರಿಮೆ ಗರಿಮೆಯನ್ನು ಹೇಗೆ ಸಾರಿದ್ದಾಳೆ ?

**ಅಥವಾ**

'ತಾಯಿ ಪಾಠ' ಕವನದ ಆಶಯವನ್ನು ನಿರೂಪಿಸಿ.

2) ಜಾಹೀರಾತುಗಳಲ್ಲಿ ಬಳಕೆಯಾಗುವ ಕನ್ನಡ ಭಾಷೆಯ ಪ್ರಯೋಗವನ್ನು ವಿವರಿಸಿರಿ.

**ಅಥವಾ**

ಯುವಜನತೆಯ ವ್ಯಕ್ತಿತ್ವದ ಮೇಲೆ ಜಾಹೀರಾತುಗಳು ಉಂಟುಮಾಡುವ ಪರಿಣಾಮಗಳೇನು ?

3) ಕುಂಬಾರಗುಂಡಯ್ಯನ ಪರ್ವದ ಔಚಿತ್ಯವನ್ನು ವಿವರಿಸಿ.

**ಅಥವಾ**

ಭೀಮ ಬಕಾಸುರನನ್ನು ವಧಿಸಿದ ಪ್ರಸಂಗವನ್ನು ವಿವರಿಸಿ.

III. ಕೆಳಗಿನ ಒಂದು ಪದ್ಯದ ಸಂದರ್ಭ ಸೂಚಿಸಿ ಅರ್ಥ ಸ್ವಾರಸ್ಯವನ್ನು ಬರೆಯಿರಿ. (1×5=5)

ವೀರಬಾಗೈ ಚಂದ್ರಹಾಸ ನೀನೆನ್ನಗಂ
ದೂರಮಾಗಿರ್ದೆ ನಮಗಿನ್ನಳಿಯನಾದೆ ಬಳಿ
ಕೂರ ಹೊರಬನದೊಳಿಹ ಚಂಡಿಕಾಲಯಕೆ ಮದುವೆಯ
ನಾಲ್ಕನೆಯ ದಿನದೊಳು
ನೀರಜಸಖಾಸ್ತ ಸಮಯದೊಳೊರ್ವನೇ ಪೋಗಿ
ಗೌರಿಯಂ ಪೂಜಿಸಿಬಹುದು ನಮ್ಮ ವಂಶದಾ
ಚಾರವಿಂದು ವರನಾದವಂತೆ ನೀ ನಿಂದಿದಂ ಮಾಡೆಂದು
ನೇಮಿಸಿದನು

**ಅಥವಾ**

ಕಪಟತನವಲಿ ಕಾಡುತ ಜನರನು
ಜಪವನು ಮಾಡಿದರೇನು ಫಲ
ಘಾತಕತನವನು ಮಾಡದೆ ನಿರಂತರ
ಗೀತೆಯನೋದಿದರೇನು ಫಲ

IV. ಕೆಳಗಿನ ಎರಡು ಸಾಲುಗಳಿಗೆ ಸಂದರ್ಭ ಸೂಚಿಸಿ ಸ್ವಾರಸ್ಯ ಬರೆಯಿರಿ. (2×4=8)

1) ಗಾಳಿ ಪರಿಮಳವನಡಗಿಪುದುಂಟೆ
2) ಬಣ್ಣವೇರಿತು ಪಾಲ್ಗಡಲು
3) ಸವತಿಗಿಂತ ಕಾಡೆ ಲೇಸು
4) ಕದ್ದೆಯೇತಕೊ ಮರಿಯನು.

V. ಕೆಳಗಿನ ಪ್ರಶ್ನೆಗಳಿಗೆ **ಒಂದೊಂದು** ವಾಕ್ಯದಲ್ಲಿ ಉತ್ತರಿಸಿರಿ. (1×8=8)

1) ಶತಯಾಗತನಯ ಅಂದರೆ ಯಾರು ?
2) ಸಂಚಿಯ ಹೊನ್ನಮ್ಮನ ಕಾಲ ಯಾವುದು ?
3) ಪುರಂದರದಾಸರ ಮೊದಲಿನ ಹೆಸರೇನು ?
4) 'ಎಳೆಹರೆಯ ಮತ್ತು ಜಾಹೀರಾತು' ಈ ಲೇಖನವನ್ನು ಬರೆದವರು ಯಾರು ?
5) 'ನೆನಪಿನ ಹೆಜ್ಜೆಗೆ ಗೆಜ್ಜೆಯ ಕಟ್ಟಿ' ಪ್ರಬಂಧದ ಕರ್ತೃ ಯಾರು ?
6) 'ಸುಳಿಯೊಳಗೆ ಪರಿಧಿ' ಯಾರು ಬರೆದ ಕಾದಂಬರಿ ?
7) ಕುಂಬಾರ ಗುಂಡಯ್ಯನ ಮನೆಯಲ್ಲಿ ಯಾರು ವಾಸ್ತವ್ಯ ಹೂಡುತ್ತಾರೆ ?
8) ಘಟೋತ್ಕಚನ ತಂದೆಯ ಹೆಸರೇನು ?

---

Reg. No. | | | | | | | | | | | | |

# BCMKALN 302

III Semester B.Com. Examination, December 2023/January 2024
(NEP – 2020) (2023 – 24 Batch Onwards)
KANNADA
ಕನ್ನಡ ಭಾಷಾ ಪತ್ರಿಕೆ – III (AECC)

ಸಮಯ : 2 ಗಂಟೆಗಳು ಗರಿಷ್ಠಾಂಕಗಳು : 60

I. ಈ ಕೆಳಗಿನವುಗಳಲ್ಲಿ ಯಾವುದಾದರೂ ಎರಡು ಪ್ರಶ್ನೆಗಳಿಗೆ ಉತ್ತರಿಸಿ. **(2×8=16)**

1) ಉತ್ತರಕುಮಾರನು ಜಂಭ ಕೊಚ್ಚಿಕೊಳ್ಳುವ ಬಗೆಯನ್ನು ವಿಶ್ಲೇಷಿಸಿರಿ.
2) 'ನಮ್ಮ ಕಾಣ್ಕೆ' ಕವಿತೆಯ ಕಾಳಜಿಗಳೇನು ? ವಿವರಿಸಿ.
3) 'ಇಷ್ಟಪಟ್ಟ ಕೆಲಸದವಳು' ಲೇಖನದಲ್ಲಿ ಕೆಲಸದವಳ ನಿಷ್ಠೆ ಎಂತಹುದು ಎಂಬುದನ್ನು ವಿವರಿಸಿ.
4) ಚಾಮುಂಡಿ ಐಸಾಸುರನನ್ನು ಸಂಹರಿಸಿದ ಬಗೆ ಹೇಗೆ ? ತಿಳಿಸಿ.

II. ಈ ಕೆಳಗಿನವುಗಳಲ್ಲಿ ಯಾವುದಾದರೂ ಎರಡು ಪ್ರಶ್ನೆಗಳಿಗೆ ಸಂಕ್ಷಿಪ್ತವಾಗಿ ಉತ್ತರಿಸಿ. **(2×6=12)**

1) 'ಕಸ್ತೂರಿ ನಿವಾಸ' ಸಿನಿಮಾದ ಕಥೆಯನ್ನು ಸಂಕ್ಷಿಪ್ತವಾಗಿ ವಿವರಿಸಿ.
2) ಪಲಮಾವು ಪ್ರಾಕೃತಿಕವಾಗಿ ತತ್ತರಿಸಿ ಹೋಗಿರುವುದಕ್ಕೆ ಕಾರಣಗಳೇನು ? ವಿವರಿಸಿ.
3) ಪುರಂದರದಾಸರ ಬದುಕು ಮತ್ತು ಭಕ್ತಿಯನ್ನು ನಿಸಾರರು ಹೇಗೆ ಚಿತ್ರಿಸಿದ್ದಾರೆ ?
4) ಡಾ. ರಾಜ್‌ಕುಮಾರ್ ಅವರ ವ್ಯಕ್ತಿತ್ವದ ಮಾನವೀಯ ಮುಖವನ್ನು ಪರಿಚಯಿಸಿ.

III. ಒಂದು ಪದ್ಯದ ಸಂದರ್ಭ ಸೂಚಿಸಿ, ಭಾವ ಸ್ವಾರಸ್ಯವನ್ನು ವಿವರಿಸಿರಿ. **(1×4=4)**

1) ನತ್ತು ಕೊಟ್ಟಳು ಹರಿಗೆ, ಅತ್ತುಬಿಟ್ಟಳು ಮರೆಗೆ
ಪತಿಯನಿತ್ತಳು ಕೊಡುಗೆ ದೇವನಡಿಗೆ
ಹೆಣ್ಣು ಮಾಯೆಯ ನೆರಳೆ ? ಹೆಣ್ಣು ಗಂಡಿನ ಮರುಳೆ ?
ಹೇಳಲೆದೆ ಉಂಟೇನು ಹಾಗಿವಳಿಗೆ.

2) ದೆಸೆಗಳಿಗೆ ನಮಿಸಿ ದೈವಕ್ಕೆಱಗಿ ರವಿಗೆ ವಂ
ದಿಸಿ ಕೋಟಿ ಭವಭವದೊಳೆನಗೀ ಹರಿಶ್ಚಂದ್ರ
ವಸುಧೇಶನೇ ಗಂಡನಾಗಲಿ ದಿಟಂ ಲೋಹಿತಾಶ್ವೇ ಮಗನಾಗಲಿ
ವಸು ಸತ್ಯಕೀರ್ತಿಯೇ ಮಂತ್ರಿಯಾಗಲಿ ತರುಣ
ಶಶಿಮೌಳಿಯೇ ದೈವವಾಗಲೆಮ್ಮಿಳೆಯ ಪಾ
ಲಿಸುವ ವಿಶ್ವಾಮಿತ್ರ ನಿತ್ಯನಾಗಲಿಯೆನುತ ಬೇಡಿಕೊಂಡಿಂತೆಂದಳು.

ಪು.ತಿ.ನೋ.

IV. ಯಾವುದಾದರೂ **ಮೂರು** ವಾಕ್ಯಗಳ ಸಂದರ್ಭ ಸೂಚಿಸಿ, ವಿಶೇಷತೆಯನ್ನು ತಿಳಿಸಿರಿ. **(3×4=12)**

1) ತರುಣ ಶಶಿಮೌಳಿಯೇ ದೈವವಾಗಲಿ.

2) ಹೆಣ್ಣು ಜನ್ಮವು ಎಂಬ ಅರಿವೆ ನಿನಗಿಲ್ಲವಾಯ್ತೆ ?

3) ಮೇಲಿನ ರಂಗು ಮರೆಯಾಗಿ ಒಳ ಬಣ್ಣ ಒಡೆಯಬೇಕು.

4) ಆರೊಡನೆ ಕಾದುವೆನು ಕೆಲಬರು ಹಾರವರು.

5) ಕ್ವಾಣನಿಗೆ ಮರಣ ಬಂದು ಬುಡ್ತು.

V. **ಎರಡು** ವಿಷಯಕ್ಕೆ ಟಿಪ್ಪಣಿ ಬರೆಯಿರಿ : **(2×4=8)**

1) ರಾಘವಾಂಕ

2) ಕೈಗುಣ ಬ್ಯಾಗುಣ

3) ಕೆ. ಎಸ್. ನಿಸಾರ್ ಅಹಮ್ಮದ್

4) ಬರಗೂರು ರಾಮಚಂದ್ರಪ್ಪ.

VI. ಕೆಳಗಿನ ಪ್ರಶ್ನೆಗಳಿಗೆ **ಒಂದೊಂದು** ವಾಕ್ಯದಲ್ಲಿ ಉತ್ತರ ಬರೆಯಿರಿ : **(1×8=8)**

1) 'ರೂಪಕ ಸಾಮ್ರಾಜ್ಯ ಚಕ್ರವರ್ತಿ' ಎಂದು ಹೆಸರು ಪಡೆದ ಕವಿ ಯಾರು ?

2) ''ಮುಗುಳು'' ಹಾಸ್ಯ ಪ್ರಬಂಧ ಸಂಕಲನದ ಲೇಖಕಿ ಯಾರು ?

3) ಹರಿಶ್ಚಂದ್ರನ ಪತ್ನಿಯ ಹೆಸರೇನು ?

4) ಜಿ. ಎನ್. ಮೋಹನ್‌ರವರು ಕನ್ನಡಕ್ಕೆ ಅನುವಾದಿಸಿದ ಲೇಖನ ಯಾವುದು ?

5) ಬೆಳಗೆರೆ ಜಾನಕಮ್ಮನವರ ಕಾವ್ಯನಾಮ ಏನು ?

6) ನಿತ್ಯೋತ್ಸವದ ಕವಿ ಯಾರು ?

7) ಐಸಾಸುರನನ್ನು ಕೊಲ್ಲುವಲ್ಲಿ ಚಾಮುಂಡಿಗೆ ನೆರವಾದವರು ಯಾರು ?

8) ಬಂಗಾರದ ಮನುಷ್ಯ ಎಂದು ಖ್ಯಾತಿ ಪಡೆದವರು ಯಾರು ?

Reg. No. | | | | | | | | | | | | |

# BCAKALN 302

**III Semester B.C.A. Degree Examination, December 2023/January 2024**
**(NEP 2020) (2023 – 24 Batch Onwards)**
**KANNADA**
**Kannada Language**

Time : 2 Hours                                                            Max. Marks : 60

I. ಎರಡು ಪ್ರಶ್ನೆಗಳಿಗೆ ಉತ್ತರಿಸಿರಿ. **(2×8=16)**

1) 'ನಂಟರು' ಪ್ರಬಂಧದ ಆಶಯವೇನು ?

2) 'ಗಿರಿಜವ್ವನ ರೊಟ್ಟಿ' ಕತೆಯನ್ನು ಸಂಗ್ರಹಿಸಿ ಬರೆಯಿರಿ.

3) 'ಎಲುಬಿನ ಹಂದರದೊಳಗೆ' ಕವನದ ತಾತ್ವಿಕತೆಯನ್ನು ವಿವರಿಸಿರಿ.

4) 'ಉತ್ತರಾದೇವಿ'ಯ ಆತ್ಮಾಭಿಮಾನವನ್ನು ವಿವರಿಸಿರಿ.

II. ಎರಡು ಪ್ರಶ್ನೆಗಳಿಗೆ ಉತ್ತರಿಸಿರಿ. **(2×6=12)**

1) ತಿರುಕನು ಕನಸಿನಲ್ಲಿ ರಾಜ್ಯವನ್ನು ಆಳಿದ ರೀತಿಯನ್ನು ವಿವರಿಸಿರಿ.

2) 'ಐದು ಬೆರಳು ಕೂಡಿ' ಕವಿತೆಯ ಆಶಯ ತಿಳಿಸಿರಿ.

3) ನಿದ್ರಾಹೀನತೆಯಿಂದ ಮನುಷ್ಯನ ಆರೋಗ್ಯದ ಮೇಲೆ ಬೀರುತ್ತಿರುವ ದುಷ್ಪರಿಣಾಮಗಳಾವುವು ?

4) 'ಸಾವಿರ ಬಗೆಯಲಿ ಸಾಗುತಿದೆ' ಕವಿತೆಯನ್ನು ವಿಶ್ಲೇಷಿಸಿರಿ.

III. ಒಂದಕ್ಕೆ ಭಾವ ಸ್ವಾರಸ್ಯ ಬರೆಯಿರಿ. **(1×4=4)**

1) ಹಸಿವಿನಿಂದ ಸತ್ತೋರು ಸೈಜುಕಲ್ಲು ಹೊತ್ತೋರು
ವದೆಸಿಕೊಂಡು ವರಗಿದೋರು ನನ್ನ ಜನಗಳು
ಕಾಲುಕಯ್ಯಿ ಹಿಡಿಯೋರು ಕೈ ಮಡಗಿಸಿಕೊಳ್ಳೋರು
ಭಕ್ತರಪ್ಪ ಭಕ್ತರೋ ನನ್ನ ಜನಗಳು

2) ಐದು ಬೆರಳು ಕೂಡಿ ಒಂದು ಮುಷ್ಠಿಯು
ಹಲವು ಮಂದಿ ಸೇರಿ ಈ ಸಮಷ್ಟಿಯು
ಬೇರೆ ಬೇರೆ ಒಕ್ಕಲು ಒಂದೆ ತಾಯ ಮಕ್ಕಳು
ಸೇರಿ ಹಾಡಿದಾಗ ಜಯವು ಗೀತೆಗೆ
ಭರತಮಾತೆಗೆ । ಭರತಮಾತೆಗೆ ।।

P.T.O.

IV. ಮೂರಕ್ಕೆ ಸಂದರ್ಭ ಬರೆಯಿರಿ. (3×4=12)

1) ಧರೆಯ ಭೋಗ ಕನಸಿನಂತೆ ಕೇಳು ಮಾನವ.

2) ಪರಸತಿಯರ ಗುಣ ಮನದಲಿ ಸ್ಮರಿಸುತ.

3) ವಾಯುಮಂಡಲವೆ ಘಮಘಮಿಸಿ ಕೆಂಪಾಗಿದೆ ಧರಣಿ !

4) ಮೊಳೆ ಜಡಿಸಿಕೊಂಡು ನಿತ್ಯ ಮರುಗುವ ಏಸುಕ್ರಿಸ್ತ.

5) ಮಳ್ಳ ಮಗುಚಿ ಮನೆಗೆ ಬರಬ್ಯಾಡ.

V. ಎರಡಕ್ಕೆ ಟಿಪ್ಪಣಿ ಬರೆಯಿರಿ. (2×4=8)

1) ತೀ. ನಂ. ಶ್ರೀ.

2) ಮೂಡ್ನಾಕೂಡು ಚಿನ್ನಸ್ವಾಮಿ.

3) ಎನ್. ಎಸ್. ಲಕ್ಷ್ಮೀನಾರಾಯಣ ಭಟ್ಟ.

4) ಗಾಡ್ಲಿ.

VI. ಒಂದು ವಾಕ್ಯದಲ್ಲಿ ಉತ್ತರಿಸಿರಿ. (8×1=8)

1) 'ಶಿವಯೋಗಾಷ್ಟಕ' ಯಾರ ಕೃತಿ ?

2) 'ಕರ್ನಾಟಕ ಸಂಗೀತ ಪಿತಾಮಹ' ಯಾರು ?

3) 'ಮಾರಾಟ' ಯಾರು ಬರೆದ ಕತೆ ?

4) 'ಹುತ್ತಗಟ್ಟದೆ ಚಿತ್ತ' ಕಥೆಯ ಲೇಖಕರು ಯಾರು ?

5) ಅ. ನ. ಕೃ. ಅವರ ಪೂರ್ಣ ಹೆಸರೇನು ?

6) ಕುವೆಂಪು ಅವರ ಹುಟ್ಟೂರು ಯಾವುದು ?

7) 'ಕಾಡು ಹಕ್ಕಿಯ ಹಾಡು' ಯಾರ ಕೃತಿ ?

8) 'ಹೊಲೆಮಾದಿಗರ ಹಾಡು' ಯಾರ ಕವನ ಸಂಕಲನ ?

IV. ಮೂರಕ್ಕೆ ಸಂದರ್ಭ ಬರೆಯಿರಿ. (3×4=12)

1) ಧರೆಯ ಭೋಗ ಕನಸಿನಂತೆ ಕೇಳು ಮಾನವ.
2) ಪರಸತಿಯರ ಗುಣ ಮನದಲಿ ಸ್ಮರಿಸುತ.
3) ವಾಯುಮಂಡಲವೆ ಘಮಘಮಿಸಿ ಕೆಂಪಾಗಿದೆ ಧರಣಿ !
4) ಮೊಳೆ ಜಡಿಸಿಕೊಂಡು ನಿತ್ಯ ಮರುಗುವ ಏಸುಕ್ರಿಸ್ತ.
5) ಮಳ್ಳ ಮಗುಚಿ ಮನೆಗೆ ಬರಬ್ಯಾಡ.

V. ಎರಡಕ್ಕೆ ಟಿಪ್ಪಣಿ ಬರೆಯಿರಿ. (2×4=8)

1) ತೀ. ನಂ. ಶ್ರೀ.
2) ಮೂಡ್ನಾಕೂಡು ಚಿನ್ನಸ್ವಾಮಿ.
3) ಎಸ್. ಎಸ್. ಲಕ್ಷ್ಮೀನಾರಾಯಣ ಭಟ್ಟ.
4) ಗಾಡ್ಲಿ.

VI. ಒಂದು ವಾಕ್ಯದಲ್ಲಿ ಉತ್ತರಿಸಿರಿ. (8×1=8)

1) 'ಶಿವಯೋಗಾಷ್ಟಕ' ಯಾರ ಕೃತಿ ?
2) 'ಕರ್ನಾಟಕ ಸಂಗೀತ ಪಿತಾಮಹ' ಯಾರು ?
3) 'ಮಾರಾಟ' ಯಾರು ಬರೆದ ಕತೆ ?
4) 'ಹುತ್ತಗಟ್ಟದೆ ಚಿತ್ತ' ಕಥೆಯ ಲೇಖಕರು ಯಾರು ?
5) ಅ. ನ. ಕೃ. ಅವರ ಪೂರ್ಣ ಹೆಸರೇನು ?
6) ಕುವೆಂಪು ಅವರ ಹುಟ್ಟೂರು ಯಾವುದು ?
7) 'ಕಾಡು ಹಕ್ಕಿಯ ಹಾಡು' ಯಾರ ಕೃತಿ ?
8) 'ಹೊಲೆಮಾದಿಗರ ಹಾಡು' ಯಾರ ಕವನ ಸಂಕಲನ ?

Reg. No. | | | | | | | | | | | | |

**BSCKALN 302**

**Third Semester B.Sc. Examination, December 2023/January 2024**
**(NEP 2020) (2023 – 24 Batch Onwards)**
**KANNADA**
**Kannada Language (AECC)**

Time : 2 Hours Max. Marks : 60

I. ಯಾವುದಾದರೂ ಎರಡು ಪ್ರಶ್ನೆಗಳಿಗೆ ಉತ್ತರಿಸಿ. **(2×8=16)**

1) ಚಂದ್ರಹಾಸ ಸಾವಿನಿಂದ ಪಾರಾದ ಬಗೆಯನ್ನು ಲಕ್ಷ್ಮೀಶ ಕವಿ ಹೇಗೆ ಚಿತ್ರಿಸಿದ್ದಾನೆ ? ವಿವರಿಸಿರಿ.

2) ಅಂಡಮಾನಿನಲ್ಲಿ ತೇಜಸ್ವಿಯವರು ಪಡೆದ ಪ್ರವಾಸದ ಅನುಭವವನ್ನು ವಿವರಿಸಿರಿ.

3) ಕ್ರಾಂತಿಯ ಪರಿಣಾಮಗಳನ್ನು 'ಕ್ರಾಂತಿಪದ' ಕವನವು ಹೇಗೆ ನಿರೂಪಿಸಿದೆ ? ವಿವರಿಸಿರಿ.

4) ಸಾಮಾಜಿಕ ಬದಲಾವಣೆಯ ಆಶಯ ಶಿವಶರಣರ ವಚನಗಳಲ್ಲಿ ಹೇಗೆ ವ್ಯಕ್ತವಾಗಿದೆ ? ವಿವರಿಸಿರಿ.

II. ಯಾವುದಾದರೂ ಎರಡು ಪ್ರಶ್ನೆಗಳಿಗೆ ಉತ್ತರಿಸಿರಿ. **(2×6=12)**

1) 'ಕಾರಿ ಹೆಗ್ಗಡೆಯ ಮಗಳು' ಕವನದಲ್ಲಿ ದುರಂತ ಚಿತ್ರಣ ಹೇಗೆ ಮೂಡಿಬಂದಿದೆ ? ವಿವರಿಸಿರಿ.

2) ಪೆರುವಿನಲ್ಲಿ ನಡೆದ ಮಹಿಳಾ ಹೋರಾಟದ ಸ್ವರೂಪಗಳನ್ನು ವಿವರಿಸಿರಿ.

3) ಕನಕ ಮತ್ತು ಕೃಷ್ಣರ ನಡುವಿನ ಸಮಾನ ಗುಣಗಳು ಕವನದಲ್ಲಿ ಹೇಗೆ ವ್ಯಕ್ತವಾಗಿದೆ ? ವಿವರಿಸಿರಿ.

4) 'ಗಾಂಧೀ ಫೊಟೋ ಆಲ್ಬಮ್' ಕವನದಲ್ಲಿ ಗಾಂಧೀಜಿಯ ವ್ಯಕ್ತಿತ್ವವು ಹೇಗೆ ಅನಾವರಣಗೊಂಡಿದೆ ? ವಿವರಿಸಿರಿ.

III. ಈ ಕೆಳಗಿನ ಪದ್ಯಭಾಗದಲ್ಲಿ ಯಾವುದಾದರೂ ಒಂದಕ್ಕೆ ಭಾವ, ಸಂದರ್ಭ ಸ್ವಾರಸ್ಯವನ್ನು ವಿವರಿಸಿರಿ. **(1×4=4)**

1) ಹೊತ್ತುಗಳೆಯದೆ ಬಂದ ಬಳಿಕವನ ಕುಲ ಶೀಲ
ವಿತ್ತ ವಿದ್ಯಾ ವಯೋ ವಿಕ್ರಮಂಗಳನೀಕ್ಷಿ
ಸುತ್ತಿರದೆ ವಿಷವ ಮೋಹಿಸುವಂತೆ ಕುಡುವುದೀತಂಗೆ ನೀನಿದಟೊಳೆಮಗೆ
ಉತ್ತರೋತ್ತರ ಮಪ್ಪುದೆಂದು ಬರೆದಿಹ ಲಿಪಿಯ
ನೆತ್ತಿ ವಾಚಿಸಿಕೊಂಡು ತರಳಾಕ್ಷಿ ತಾನದಕೆ
ಮತ್ತೊಂದಭಿಪ್ರಾಯಮಂ ತಿಳಿದಳುಲ್ಲಂಘಿಸುವರುಂಟೆ ವಿಧಿಕೃತವನು

P.T.O.

2) ಎಲ್ಲ ಚೆನ್ನಾಗಿತ್ತು, ಏನಾಯಿತು ಕೊನೆಯ ಪುಟದಲ್ಲಿ ?
ಗಾಂಧಿ ತಾತ! ನಿನ್ನೆದೆಯಿಂದ ಒಸರುತ್ತಿದೆ ರಕ್ತ!
ಸ್ಪಷ್ಟ ಬಂದೂಕಿನ ಮೊನೆಗುರುತು ಎದೆ ಮೇಲೆ...
ಮುಚ್ಚಿದ ಕಣ್ಣರೆಪ್ಪೆಯ ಮೇಲೆ ಎಷ್ಟೊಂದು ದಣಿವು
ತುಟಿಯಲ್ಲಿ ಎಂದಿನ ನಿರಾತಂಕ.

IV. ಈ ಕೆಳಗಿನ ಪದ್ಯ ಭಾಗಗಳಲ್ಲಿ ಯಾವುದಾದರೂ ಮೂರಕ್ಕೆ ಭಾವ ಸಂದರ್ಭ ಬರೆಯಿರಿ. **(3×4=12)**

1) ತೂರುಗಾಳಿಗೆ ಕಡಲು ಕುದಿಯಿತು.
2) ಎಲ್ಲಿಯೊ ಕಂಡಿದ್ದೆನಲ್ಲ ಈ ಕೈಗಳನು ?
3) ಸ್ವರ್ಗ ಹೋಗುವುದಿಲ್ಲ, ನರಕ ಬರುವುದು ಇಲ್ಲ.
4) ಕನಕ ಅವನ ಭಂಟ, ನೆಂಟ, ಸರ್ವಸ್ವ.
5) ಕಣ್ಣು ಹಾಯಿಸಿದಷ್ಟು ದೂರ ವಿಶ್ವ.

V. ಯಾವುದಾದರೂ ಎರಡು ವಿಷಯಗಳಿಗೆ ಟಿಪ್ಪಣಿ ಬರೆಯಿರಿ. **(2×4=8)**

1) ಗೋರೂರು ರಾಮಸ್ವಾಮಿ ಅಯ್ಯಂಗಾರ್
2) ಬಿ.ಜಿ.ಎಲ್. ಸ್ವಾಮಿ
3) ಸಿದ್ಧಲಿಂಗಯ್ಯ
4) ಲಕ್ಷ್ಮೀಶ ಚೊಕ್ಕಾಡಿ.

VI. ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿರಿ. **(8×1=8)**

1) 'ಕಾರಿ ಹೆಗ್ಗಡೆಯ ಮಗಳು' ಕವನದ ಕರ್ತೃ ಯಾರು ?
2) ಗೋರೂರು ರಾಮಸ್ವಾಮಿ ಅಯ್ಯಂಗಾರರ ಪ್ರವಾಸ ಕಥನದ ಹೆಸರೇನು ?
3) ತೇಜಸ್ವಿಯವರು ಭೇಟಿಯಾದ ಕೃಷಿ ವಿಜ್ಞಾನಿ ಯಾರು ?
4) ನೇಮಿಚಂದ್ರರವರ ಹುಟ್ಟೂರು ಯಾವುದು ?
5) ಕನ್ನಡದ ವರಕವಿ ಯಾರು ?
6) 'ಕನಕ ಕೃಷ್ಣ' ಕವನದ ಕರ್ತೃ ಯಾರು ?
7) ನೈಸರ್ಗಿಕ ಕೃಷಿಯನ್ನು ಪ್ರತಿಪಾದಿಸಿದ ಜಪಾನಿನ ಕೃಷಿ ವಿಜ್ಞಾನಿ ಯಾರು ?
8) 'ವಚನಕಾರರ ವಿಚಾರ ಕ್ರಾಂತಿ' ಲೇಖನವನ್ನು ಬರೆದವರು ಯಾರು ?

---

Reg. No. | | | | | | | | | | | | |

**BBAKALN 301**

## III Semester B.B.A. Degree Examination, December 2023/January 2024
## (NEP – 2020) (2022 – 23 Batch)
## KANNADA
### ನುಡಿವಿವೇಕ

Time : 2 Hours Max. Marks : 60

I. ಕೆಳಗಿನ ಮೂರು ಪ್ರಶ್ನೆಗಳಿಗೆ ಉತ್ತರಿಸಿ. **(3×8=24)**

1) 'ಆತ್ಮವಿಮರ್ಶೆಯ ಮೂಲಕ ವ್ಯಕ್ತಿಗತ ಅರಿವು ಮತ್ತು ಸಮಾಜ ಸುಧಾರಣೆ ಸಾಧ್ಯ' ಎನ್ನುವುದನ್ನು ಬಸವಣ್ಣನ ವಚನದ ಮೂಲಕ ವಿಶ್ಲೇಷಿಸಿ.

**ಅಥವಾ**

''ನಮ್ಮ ನಾಡು, ನುಡಿ, ಸಂಸ್ಕೃತಿಗಳನ್ನು ನಾವೇ ಉಳಿಸಿ ಬೆಳೆಸಬೇಕು'' ಎಂಬ ಎಚ್ಚರಿಕೆಯನ್ನು ''ಕನ್ನಡದ ಮಾತು'' ಕವನದ ಹಿನ್ನೆಲೆಯಲ್ಲಿ ವಿಚಾರ ಮಾಡಿ.

2) ''ಒಂದು ದೃಷ್ಟಿಯಿಂದ ತುಳುನಾಡೆಂದರೆ ಪುಟ್ಟ ಭಾರತವೇ ಆಗಿದೆ'' ಎಂಬ ಮಾತನ್ನು ತುಳುನಾಡಿನ ಸಾಂಸ್ಕೃತಿಕ ಹಿನ್ನೆಲೆಯಲ್ಲಿ ಪರಿಶೀಲಿಸಿ.

**ಅಥವಾ**

ಕೊಡವರ ಧಾರ್ಮಿಕ ನಂಬಿಕೆಗಳು ಅವರ ಸಾಮಾಜಿಕ ಬದುಕಿನ ಅನನ್ಯತೆಗೂ ಕಾರಣ ಎನ್ನುವುದನ್ನು ವಿಶ್ಲೇಷಿಸಿ.

3) ತಿರುಗೋಡಿನ ರೈತ ಮಕ್ಕಳು ಕಾದಂಬರಿಯಲ್ಲಿ ಚಿತ್ರಿತವಾದ ಜೀತಪದ್ಧತಿಯ ದಾರುಣತೆಯನ್ನು ಬರೆಯಿರಿ.

**ಅಥವಾ**

ದೇಶದ ಅಭಿವೃದ್ಧಿಗೆ ಮಾರಕವಾಗಿರುವ ವ್ಯವಸ್ಥೆ, ಅವ್ಯವಸ್ಥೆಗಳನ್ನು ಕಾದಂಬರಿ ಹೇಗೆ ಧ್ವನಿಸುತ್ತದೆ ? ವಿಚಾರ ಮಾಡಿ.

II. ಕೆಳಗಿನ ಮೂರು ಪ್ರಶ್ನೆಗಳಿಗೆ ಸಂಕ್ಷಿಪ್ತವಾಗಿ ಉತ್ತರಿಸಿ. **(3×5=15)**

1) ''ತವರೂರ ಮನೆ ನೋಡ ಬಂದೆ'' ಜನಪದಗೀತೆಯಲ್ಲಿ ಹೆಣ್ಣೊಬ್ಬಳಲ್ಲಿ ವ್ಯಕ್ತವಾದ ತವರಿನ ಬಗೆಗಿನ ಕಾಳಜಿಯನ್ನು ಪರಿಶೀಲಿಸಿ.

**ಅಥವಾ**

ಪುರಂದರದಾಸರ ಕೀರ್ತನೆಯಲ್ಲಿ ಕಂಡುಬರುವ ಸಾಮಾಜಿಕ ಕಳಕಳಿಯನ್ನು ಪರಿಶೀಲಿಸಿ.

2) ನೀರಿನ ಅವಶ್ಯಕತೆ ಮತ್ತು ಅದನ್ನು ಉಳಿಸಿಕೊಳ್ಳುವ ವಿಧಾನಗಳ ಕುರಿತು ಬರೆಯಿರಿ.

**ಅಥವಾ**

ಕೊಡವರ ಧಾರ್ಮಿಕ ನಂಬಿಕೆಗಳು ಬೇರೆ ಸಮುದಾಯದ ಧಾರ್ಮಿಕ ಅಂಶಗಳನ್ನು ಸ್ವೀಕರಿಸಿಕೊಂಡ ಬಗೆಯನ್ನು ಬರೆಯಿರಿ.

3) ಮೇಸ್ತ್ರಿ ದರ್ಗೋಜಿಯ ನಯ ವಂಚಕತನವನ್ನು ಕಾದಂಬರಿ ಹೇಗೆ ಚಿತ್ರಿಸುತ್ತದೆ ? ವಿವರಿಸಿ.

**ಅಥವಾ**

ಕಾರ್ಮಿಕ ನಾಯಕ ನಂಬೂದಿರಿಯ ಕಾರ್ಯವೈಖರಿಯನ್ನು ಪರಿಶೀಲಿಸಿ.

III. ಕೆಳಗಿನ **ಒಂದು** ಪದ್ಯ ಭಾಗದ ಸಂದರ್ಭ ಸ್ವಾರಸ್ಯವನ್ನು ವಿವರಿಸಿ. **(1×5=5)**

ಲೋಕದ ಡೊಂಕ ನೀವೇಕೆ ತಿದ್ದುವಿರಿ ?
ನಿಮ್ಮ ನಿಮ್ಮ ತನುವ ಸಂತೈಸಿಕೊಳ್ಳಿ
ನಿಮ್ಮ ನಿಮ್ಮ ಮನವ ಸಂತೈಸಿಕೊಳ್ಳಿ
ನೆರೆಮನೆಯ ದುಃಖಕ್ಕೆ ಅಳುವರ ಮೆಚ್ಚ
ನಮ್ಮ ಕೂಡಲ ಸಂಗಮದೇವ

**ಅಥವಾ**

ಅತ್ತೆ ಮಾವಾರ ಕಾಟದಲಿ ಬೆಂದು
ಬಳಲಿ ಬೇಸತ್ತು ಬಂದೆನು ನಾನು
ಏನ ಹೇಳಾಲಿ ನಾನಿಂದು ಇನ್ನು
ಸತ್ತ ತಾಯಿಯನೆಂತು ಮರೆಯಲಿ ಇನ್ನು

IV. ಕೆಳಗಿನ **ಎರಡು** ಸಾಲುಗಳ ಸಂದರ್ಭ ಸ್ವಾರಸ್ಯವನ್ನು ಬರೆಯಿರಿ. **(2×4=8)**

1) ಅತ್ತಲಿತ್ತ ಹೋಗದಂತೆ ಹೆಳವನ ಮಾಡಯ್ಯ ತಂದೆ.
2) ಉಗ್ರಾಹಿಗಾಹುತಿಯಾದನೆಂದು ಪೇಳ್ವೆನೆ ಎನ್ನ ಕಂದ.
3) ಕುಟಿಲವ ಬಿಡದಿಹ ಕುಜನರು ಮಂತ್ರವ ಪಠನೆಯ ಮಾಡಿದರೇನು ಫಲ.
4) ತಾಯಿಯಿದ್ದರೆ ಸಂಪತ್ತು ಹೆಣ್ಣಿಗೆ.

V. ಕೆಳಗಿನ ಪ್ರಶ್ನೆಗಳಿಗೆ **ಒಂದು** ವಾಕ್ಯದಲ್ಲಿ ಉತ್ತರಿಸಿರಿ. **(8×1=8)**

1) ಬಸವಣ್ಣನ ಜನ್ಮಸ್ಥಳ ಯಾವುದು ?
2) 'ಸೋಮನಾಥ ಚರಿತೆ' ಯಾರ ಕಾವ್ಯ ?
3) ''ದಾಸರೆಂದರೆ ಪುರಂದರ ದಾಸರಯ್ಯ'' ಎಂದವರು ಯಾರು ?
4) ''ಕನ್ನಡ ಕಣ್ವ'' ಯಾರು ?
5) ಡಾ. ತಾಳ್ತಜೆ ವಸಂತ ಕುಮಾರ್ ಅವರ ಅಭಿನಂದನಾ ಗ್ರಂಥ ಯಾವುದು ?
6) 'ನೇಸರ' ಪದದ ಅರ್ಥವೇನು ?
7) ತಿರುಗೋಡಿನ ರೈತ ಮಕ್ಕಳು ಕಾದಂಬರಿಯ ಕರ್ತೃ ಯಾರು ?
8) ರಾಮುಡುವಿನ ಮಗಳ ಹೆಸರೇನು ?

---